Date: 06.03.2025 O.S.No. 204/2022

(PW-2)

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಎಮ್.ಬಿ.ಬಿ. ವಕೀಲರಿಂದಃ ವಾದಿಯರ ಪರಃ</u>

ನಾನು ನನ್ನ ಮುಖ್ಯ ವಿಚಾರಣೆಯನ್ನು ಸಾಕ್ಷಿ ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆದ ವಿಷಯ ನಿಜವಿರುತ್ತದೆ. ನಾನು ನನ್ನ ಸಾಕ್ಷಿ ಪ್ರಮಾಣ ಪತ್ರ ಓದಿಸಿ ತಿಳಿದುಕೊಂಡು ಸಹಿ ಮಾಡಿದ್ದು ಅದರಲ್ಲಿ ಕಂಡು ಬರುವ ಸಹಿ ನನ್ನದೇ ಆಗಿರುತ್ತದೆ.

ಪ್ರತಿವಾದಿ ವಾದಿಗೆ ದಾವೆದ ಆಸ್ತಿಯನ್ನು ಕ್ರಯಕ್ಕೆ ಕೊಡಲು ಒಪ್ಪಿ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದಾನೆ, ನಾನು ಅದಕ್ಕೆ ಸಾಕ್ಷಿ ಸಹಿ ಮಾಡಿರುತ್ತೇನೆ. ಸಾಕ್ಷಿ ನಿಪಿ-1 ನೋಡಿ ಗುರುತಿಸಿರುತ್ತಾರೆ. ನಿಪಿ-1 ರ ಮೇಲಿನ ಸಾಕ್ಷಿಯ ಸಹಿಯನ್ನು ಈಗಾಗಲೇ ನಿಪಿ-1 (ಡಿ) ಅಂತ ಗುರುತಿಸಲಾಗಿದೆ. ನನ್ನ ಜೊತೆ ನಿಪಿ-1 ಕ್ಕೆ ಧರೆಪ್ಪ ತಂಗಡಿ ಅನ್ನುವವರು ಸಾಕ್ಷಿ ಸಹಿ ಮಾಡಿದ್ದಾರೆ. ವಾದಿ ಮತ್ತು ಪ್ರತಿವಾದಿಯರು ಸಹ ನಿಪಿ-1 ನೋಂದಣಿ ಕಾಲಕ್ಕೆ ನನ್ನ ಸಮಕ್ಷಮ ಸಹಿ ಮಾಡಿದ್ದಾರೆ. ಸಾಕ್ಷಿ ನಿಪಿ-1 ರ ಮೇಲಿನ ವಾದಿ, ಪ್ರತಿವಾದಿಯರ ಸಹಿಗಳನ್ನು ಗುರುತಿಸಿದ್ದಾರೆ. ನಿಪಿ-1 ಕರಾರು ಪತ್ರವನ್ನು ಶ್ರೀ ಪ್ರಶಾಂತಕುಮಾರ ಕೋರೆ ಅನ್ನುವ ಪತ್ರ ಬರಹಗಾರರು ತಯಾರಿಸಿ ಸಹಿ ಮಾಡಿರುತ್ತಾರೆ.

<u>ಪಾಟೀ ಸವಾಲುಃ-</u> ವಕೀಲರ ಕೋರಿಕೆ ಮೇರೆಗೆ ಮುಂದೂಡಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

Sd/- 06.03.25

ಹಿರಿಯ ದಿವಾಣಿ ನ್ಯಾಯಾಧೀಶರು, ಹುಕ್ಕೇರಿ
ಸಂಚಾರಿ ನ್ಯಾಯಾಲಯ ಸಂಕೇಶ್ವರ